ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದು

1387 (1882) - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ 100 ಎಕರೆಗಿಂತ ಹೆಚ್ಚು ನೀರಾವರಿಯಾಗುವ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಆ) 1-2 ವರ್ಷಗಳಿಂದ ಇದರ ಬಗ್ಗೆ ಪತ್ರ ವ್ಯವಹಾರ ನಡೆದರೂ ಸಹ ಇಲ್ಲಿಯವರೆವಿಗೂ ಯಾವ ಕ್ರಮ ಜರುಗಿಲ್ಲವೇಕೆ?

ಇ) ಈಗಲಾದರೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಂಡು ದುರಸ್ತಿಗೊಳಿಸಿ ಬಡ ರೈತರಿಗೆ ನೀರಾವರಿ ಅನುಕೂಲ ಮಾಡಿಕೊಡುವುದು ಯಾವಾಗ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ 13 ಕೆರೆಗಳು 100 ಎಕರೆಗಿಂತ ಹೆಚ್ಚು ನೀರಾವರಿ ಆಗುತ್ತಿದ್ದು ಇವುಗಳನ್ನು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಿಂದ ಸಣ್ಣ ನೀರಾವರಿ ಇಲಾಖೆಗೆ ವರ್ಗಾವಣೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಆ) ಮಾನ್ಯ ಶಾಸಕರು ಸೂಚಿಸಿರುವ ಸೇಡಂ ತಾಲ್ಲೂಕಿನಲ್ಲಿನ 100 ಎಕರೆ ಭೂಮಿಗಿಂತ ಹೆಚ್ಚು ನೀರಾವರಿಯಾಗುತ್ತಿರುವ 13 ಸಣ್ಣ ನೀರಾವರಿ ಕೆರೆಗಳನ್ನು ದುರಸ್ತಿಗೊಳಿಸಲು ಜಿಲ್ಲಾ ಪಂಚಾಯತ್ ವ್ಯಾಪ್ತಿಯಿಂದ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ವರ್ಗಾವಣೆ ಪ್ರಸ್ತಾವನೆ ಪರಿಶೀಲಿಸಲಾಗುವುದು.

ಇ) ಸದರಿ ಕೆರೆಗಳ ವ್ಯಾಪ್ತಿಯನ್ನು ಸಣ್ಣ ನೀರಾವರಿ ಇಲಾಖೆಗೆ ವರ್ಗಾವಣೆಯಾದ ನಂತರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಸೇಡಂ ಕ್ಷೇತ್ರದ ಕೆರೆಗಳ ದುರಸ್ತಿ

1388 (1883) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದ (ಸೇಡಂ ತಾಲ್ಲೂಕು ಹಾಗೂ ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು ಸೇರಿ) ಚಿತ್ತಾಪುರ ತಾಲ್ಲೂಕಿನ ಆಲೂರು (ಜಿ) ಕೆರೆ ಪೂರ್ತಿಯಾಗಿ ಬಿರುಕು ಬಿಟ್ಟು ನೀರು ವೃಥಾ ಹೋಗಿ ನೀರು ಸರಬರಾಜು ಆಗದ ಬಗ್ಗೆ ಇಲ್ಲಿಯವರಗೆ ಯಾವ ಕ್ರಮ ಜರುಗಿಲ್ಲವೇಕೆ?

ಅ) ಈ ಕೆರೆ ದುರಸ್ತಿ ಇಲ್ಲದೇ ಯಾವ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸದೇ ಇರಲು ಕಾರಣವೇನು.

ಇ) ಈಗಲಾದರೂ ಕೋಟ್ಯಾನುಗಟ್ಟಲೆ ಖರ್ಚಾಗಿರುವ ಈ ಕೆರೆಯ ದುರಸ್ತಿ ಮಾಡಿಸಿ ಗುಡ್ಡಗಾಡು ಭಾಗದ ರೈತರಿಗೆ ನೀರಾವರಿ ಅನುಕೂಲ ಮಾಡಲು ಕ್ರಮ ಕೈಗೊಳ್ಳುವರೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು):

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ಮತಕ್ಷೇತ್ರದಲ್ಲಿ ಬರುವ ಚಿತ್ತಾಪುರ ತಾಲ್ಲೂಕಿನ ಆಲೂರು (ಬಿ) ಕೆರೆಯ ಖಾಯಂ ದುರಸ್ತಿಗಾಗಿ ತಾಂತ್ರಿಕ ತಜ್ಞರಿಂದ ಅಭಿಪ್ರಾಯ ಪಡೆಯಲು ಸರ್ಕಾರದಿಂದ ತಜ್ಞರ ಸಮಿತಿಯನ್ನು ನೇಮಕ ಮಾಡಲು ಪರಿಶೀಲಿಸಲಾಗುವುದು.

ಆ) ಈ ಕೆರೆಯು ಪದೇ ಪದೇ ಕುಸಿದಿದ್ದರಿಂದ ಉಚ್ಚ ಮಟ್ಟದ ತಾಂತ್ರಿಕ ಸಮಿತಿಯ ನಿರ್ದೇಶನ ಅವಶ್ಯಕವಾಗಿರುತ್ತದೆ. ಈ ಕೆರೆಯ ದುರಸ್ತಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ತಜ್ಞರ ಸಮಿತಿಯು ನೇಮಕಗೊಂಡ ನಂತರ ಅದು ನೀಡುವ ವರದಿಯನ್ನಾಧರಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲಾ.

ಸೇಡಂ ತಾಲ್ಲೂಕಿನ ಅಡಕಿ ಕೆರೆಯ ಕೋಡಿ ಕಾಲುವೆಗಳ ದುರಸ್ತಿ

1389 (1884) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ), ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ನಿಜಾಮ್ ಕಾಲದ ಅಡಕಿ ಕೆರೆಯ ಕೋಡಿ (ವೇಸ್ಟ್ ವೇರ್) ಕಾಲುವೆಗಳು ನಾದುರಸ್ತಿಯಾಗಿ ರೈತರ ನೀರಾವರಿ ಭೂಮಿಗೆ ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಇದರ ಬಗ್ಗೆ ಜರುಗಿರುವ ಕ್ರಮವೇನು.

ಇ) ಈಗಲಾದರೂ ಸಹ ಈ ನಿಜಾಮ್ ಕಾಲದ ಕೆರೆಗಳನ್ನು ದುರಸ್ತಿ ಮಾಡಿಸಿ ಆಂಧ್ರ ಗಡಿ ಅಂಚಿನಲ್ಲಿರುವ ರೈತರಿಗೆ ಇದೇ ವರ್ಷ ನೀರಾವರಿ ಆಗುವಂತೆ ಅನುಕೂಲ ಮಾಡಿ ಕೊಡಬಹುದೇ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಜಲ ಸಂಪನ್ಮೂಲ ರಾಜ್ಯ ಸಚಿವರು)

ಅ) ಬಂದಿದೆ.

ಆ) ಕೋಡಿ, ಕಾಲುವೆಗಳ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ದುರಸ್ತಿ ಕಾರ್ಯ ಪ್ರಗತಿಯಲ್ಲಿದ್ದು ಬರುವ ಮುಂಗಾರು ಋತುವಿನಲ್ಲಿ ನೀರಾವರಿಗೆ ಅನುಕೂಲ ಮಾಡಿ ಕೊಡಲಾಗುವುದು.